## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಪಾವಗಡ

**ಸಿ ಸಿ ನಂ.1241/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮೋಹನ್ | ಚಾ ಸಾ -5 |
| ತಂದೆಯ ಹೆಸರು | - | ಬೂತಣ್ಣ | ಫ್ರಾ ಸಾ -1 |
| ವಯಸ್ಸು | - | 37 ವರ್ಷ | |
| ಉದ್ಯೋಗ | - | ಪೋಲಿಸ್ ಪೇದೆ | |
| ವಾಸ ಸ್ಥಳ | - | ಮಧುಗಿರಿ | |

ದಿನಾಂಕಃ 03.10.2024 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:

ನಾನು 2014 ರಿಂದ 2021 ರವರೆಗೆ ಪಾವಗಡ ಠಾಣೆಯಲ್ಲಿ ಪೋಲಿಸ್ ಪೇದೆ ಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿ.29.09.2020 ರಂದು ಚಾಸಾ-22 ರವರು ಪಾವಗಡ ಠಾಣೆಯ 158/2020 ರ ಪ್ರಕರಣದಲ್ಲಿ ಕಳ್ಳತನ ಮಾಡಿದ ಆರೋಪಿತರ ಹಾಗೂ ಕಳುವಾದ ಮಾಲಿನ ಪತ್ತೆಗಾಗಿ ನನ್ನನ್ನು ಮತ್ತು ಚಾಸಾ-3 ರವರನ್ನು ನೇಮಕ ಮಾಡಿದ್ದು, ಅದರಂತೆ ನಾವುಗಳು ಅದೇ ದಿನ ಪಾವಗಡ ಟೌನ್, ಬೊಮ್ಮತನಹಳ್ಳಿ, ಗುಂಡ್ಲಾಹಳ್ಳಿ, ಗೊರಸಮಾವು, ಅಚ್ಚಮ್ಮನಹಳ್ಳಿ ಕಡೆಗಳಲ್ಲಿ ಗಸ್ತುಮಾಡಿಕೊಂಡು ಮಾಹಿತಿ ಸಂಗ್ರಹಿಸಿ ನಾವು ಪಾವಗಡದ ಕಡೆಗೆ ವಾಪಸ್ಸು ಬರುತ್ತಿರುವಾಗ ಚಳ್ಳಕೆರೆ ಪಾವಗಡ ರಸ್ತೆ ಡಬಲ್ ಮಿಲ್ ಬಳಿ ಒಬ್ಬ ವ್ಯಕ್ತಿ ಪಾವಗಡದ ಕಡೆಯಿಂದ ಬೈಕಿನಲ್ಲಿ ಬರುತ್ತಿದ್ದು, ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುತ್ತಾನೆ ಆದ ಕಾರಣ ನಾವು ಅನುಮಾನದ ಮೇರೆಗೆ ಅವನನ್ನು ಹಿಡಿದು, ವಿಚಾರಿಸಿದಾಗ ಆತ ತನ್ನ ಹೆಸರು ಅರುಣ್ ಕುಮಾರ್ ಬಿನ್ ಲೇಟ್ ರಂಗಸ್ವಾಮಿ, ಅರೆಕ್ಯಾತನಹಳ್ಳಿ ಮತ್ತು ಜಾಜೂರಾಯನಹಳ್ಳಿ ಎಂದು ತಿಳಿಸಿರುತ್ತಾನೆ. ಬೈಕಿನ ಸೈಡ್ ಬ್ಯಾಗ್ ನ್ನು ಪರಿಶೀಲಿಸಿದಾಗ ಕಬ್ಬಿಣದ ರಾಡು, ಆಕ್ಸಲ್ ಬ್ಲೇಡ್ ಹಾಗೂ ಸ್ಕ್ರ್ಯೂಡ್ರೈವರ್ ಸಿಕ್ಕಿರುತ್ತದೆ. ಅದರ ಬಗ್ಗೆ ವಿಚಾರಿಸಸಿದಾಗ ಆತ ಸಂಜೀವರಾಯಲು ಎಂಬ ವ್ಯಕ್ತಿಯೊಂದಿಗೆ ರಾತ್ರಿ ವೇಳೆ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದಾಗಿ ತಿಳಿಸಿರುತ್ತಾನೆ. ಆದ ಕಾರಣ

ಆತನನ್ನು ನಾವು ವಶಕ್ಕೆ ಪಡೆದು ಚಾಸಾ-22 ರವರ ಮುಂದೆ ವರದಿ ಸಮೇತ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ವರದಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಕಬ್ಬಿಣದ ರಾಡು, ಆಕ್ಸಲ್ ಬ್ಲೇಡ್ ಹಾಗೂ ಸ್ಕ್ರೂಡ್ರೈವರ್‌ನ್ನು ನೋಡಿದರೆ ಗುರುತಿಸುತ್ತೇನೆ ಹಾಗೂ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಪಿ.ಹೆಚ್.ಎಸ್ ವಕೀಲರಿಂದಃ</u>

ಬೆಳಗ್ಗೆ 8.00 ಗಂಟೆಗೆ ಪಾವಗಡ ಬಿಟ್ಟಿರುತ್ತೇವೆ. ಸಿರಾ ರಸ್ತೆ, ಪೆನುಗೊಂಡ ರಸ್ತೆ, ಹಿಂದೂಪುರ, ತುಮಕೂರು ರಸ್ತೆಗಳಲ್ಲಿ ಗಸ್ತು ಮಾಡಿರುತ್ತೇವೆ. ನನ್ನೊಂದಿಗೆ ಚಾಸಾ-3 ರವರು ಇದ್ದರು. ಪಾವಗಡ ಟೌನ್ ನಲ್ಲಿ ಮಧ್ಯಾಹ್ನ 12.00 ಗಂಟೆಯವರೆಗೂ ಇದ್ದೆವು. ಮೌಖಿಕವಾಗಿ ಚಾಸಾ-22 ರವರು ಆದೇಶ ನೀಡಿರುತ್ತಾರೆ.

ಬೊಮ್ಮತನಹಳ್ಳಿಯಿಂದ ಗೊರಸಮಾವು, ಅಚ್ಚಮ್ಮನಹಳ್ಳಿ ಕಡೆಗಳಲ್ಲಿ ಗಸ್ತು ಮಾಡಿರುತ್ತೇವೆ. ಬೊಮ್ಮತನಹಳ್ಳಿಯಿಂದ ಪಾವಗಡ 6 ಕಿ.ಮೀ ಇರುತ್ತದೆ ಎಂದರೆ ಸರಿ. ಬೊಮ್ಮತನಹಳ್ಳಿ ಯಿಂದ ಬರುವಾಗ ಗೊರಸಮಾವು, ಗುಂಡ್ಲಹಳ್ಳಿ ಸಿಗುತ್ತದೆ ಎಂದರೆ ಸರಿ. ಬೊಮ್ಮತನಹಳ್ಳಿ ಯಾವಾಗ ಬಿಟ್ಟೆವು ಎಂದು ನೆನಪಿಲ್ಲ. ನಾವು ಮಾಹಿತಿ ಕಲೆ ಹಾಕುತ್ತಿದ್ದ ಕಾರಣ ಅಲ್ಲೆಲ್ಲ ಸುಮಾರು 1 ಗಂಟೆ ಕಾಲ ಇದ್ದೆವು. ಬೊಮ್ಮತನಹಳ್ಳಿಯಲ್ಲಿ ಸುಮಾರು 12.00 ರಿಂದ 1.00 ಗಂಟೆಯವರೆಗೂ ಇದ್ದೆವು ನಿಖರವಾಗಿ ನೆನಪಿಲ್ಲ. ಗೊರಸಮಾವು, ಗುಂಡ್ಲಹಳ್ಳಿಯಲ್ಲಿ ಸುಮಾರು 1 ಗಂಟೆಯ ಕಾಲ ಇದ್ದೆವು. ಈ ಬಗ್ಗೆ ನನ್ನ ಹೇಳಿಕೆಯಲ್ಲಿ ನಮೂದು ಮಾಡಿಲ್ಲ.

ಕಬ್ಬಿಣದ ರಾಡು, ಆಕ್ಸಲ್ ಬ್ಲೇಡ್ ಹಾಗೂ ಸ್ಕ್ರೂಡ್ರೈವರ್‌ನ್ನು ಆರೋಪಿಯ ಬಳಿ ಕಂಡಾಗ ಆ ಬಗ್ಗೆ ಪೋಟೋ ತೆಗದಿಲ್ಲ. ಚಾಸಾ-22 ರವರಿಗೆ ವರದಿಯೊಂದಿಗೆ ನಾವು ಪೋಟೋ ತೆಗೆದುಕೊಟ್ಟಿಲ್ಲ. 1 ನೇ ಆರೋಪಿಯನ್ನು ಈ ಹಿಂದೆ ನೋಡಿಲ್ಲ, ಆತನಿಂದ ಕಬ್ಬಿಣದ ರಾಡು, ಆಕ್ಸಲ್ ಬ್ಲೇಡ್ ಅಥವಾ ಸ್ಕ್ರೂಡ್ರೈವರ್ ಸಿಕ್ಕಿರುವುದಿಲ್ಲ, ಈ ದಿನವೆ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ